ಅ) ವ್ಯವಸಾಯಗಾರರ ಜಾನುವಾರುಗಳು ಹೊರಗಡೆ ಬಿಡಲು ಅವಕಾಶವಿಲ್ಲದಿರುವಂತೆ ಅಳತೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರದವರು ಇದರ ಬಗ್ಗೆ ಏನು ಕ್ರಮ ಕೈಗೊಂಡಿದೆ ?

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು). —

ಅ) ಹೌದು.

ಆ) ಇಲ್ಲ.

ಇ) ತೊಂದರೆ ಇದ್ದಲ್ಲಿ ಪರಿಹಾರ ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಅವನ್ನು ಪರಿಹರಿಸುತ್ತಾರೆ.

ಹಂಮನಾಬಾದ್ ಕ್ಷೇತ್ರದಲ್ಲಿ ಕೈಗಾರಿಕಾ ಅಭಿವೃದ್ಧಿ ಬಗ್ಗೆ.

೩೬೦ ಶ್ರೀ ಬಸವರಾಜ ಪಾಟೀಲ್ (ಹುಮನಾಬಾದ್).—ಮಾನ್ಯ ಭಾರೀ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಮನಾಬಾದ್ ತಾಲ್ಲೂಕ್‌ದಲ್ಲಿ ಕೈಗಾರಿಕೋದ್ಯಮಕ್ಕಾಗಿ ಸರ್ಕಾರದವರು ೫೦೦ ಎಕರೆ ಜಮೀನನ್ನು ವಶಪಡಿಸಿಕೊಂಡಿರುವುದು ನಿಜವೆ ;

ಆ) ಸದರಿ ಜಮೀನಿನಲ್ಲಿ ಕೈಗಾರಿಕೆಗಾಗಿ ಈಗ ಒಟ್ಟು ಎಷ್ಟು ಜನ ಕೈಗಾರಿಕೋದ್ಯಮಿಗಳಿಗೆ ಜಮೀನು ಕೊಡಲಾಗಿದೆ ;

ಇ) ಸದರಿ ಕೈಗಾರಿಕೆಗಳು ಯಾವ ಹಂತದಲ್ಲಿ ಇವೆ ಮತ್ತು ಯಾವ ಯಾವ ಕೈಗಾರಿಕೆಗಾಗಿ ಪರವಾನಗಿ ನೀಡಲಾಗಿದೆ ;

ಈ) ಸದರಿ ಜಮೀನಿನಲ್ಲಿ ನೀರಿನ ಕೊರತೆ ಇದ್ದುದರಿಂದ ಕೈಗಾರಿಕೋದ್ಯಮ ಪ್ರಗತಿ ಗತಿಯಲ್ಲಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ; ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್, (ಭಾರೀ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು).—

ಅ) ನಿಜ,

ಆ) ಇಲ್ಲ

ಇ)

೧)	ಅಶಯ ಪತ್ರ ನೀಡಿರುವ ಕೈಗಾರಿಕೆಗಳ ಸಂಖ್ಯೆ	: ೪
೨)	ಹಂಚಿಕೆ ಪತ್ರ ನೀಡಿರುವ ಕೈಗಾರಿಕೆಗಳ ಸಂಖ್ಯೆ	: ೧೩
೩)	ಸ್ಥಿರೀಕಾರಕ ಪತ್ರ ನೀಡಿರುವ ಕೈಗಾರಿಕೆಗಳ ಸಂಖ್ಯೆ	೨
೪)	ನಿವೇಶನದ ಕಬೇ ಕೊಟ್ಟಿರುವ ಕೈಗಾರಿಕೆಗಳ ಸಂಖ್ಯೆ	೬
೫)	ಗುತ್ತಿಗೆ ಕರಾರು ನೀಡಿರುವ ಕೈಗಾರಿಕೆಗಳ ಸಂಖ್ಯೆ	: ೧೧
೬)	ಕಟ್ಟಡದ ಕೆಲಸವನ್ನು ಪ್ರಾರಂಭಿಸಿರುವ ಕೈ. ಸಂಖ್ಯೆ	: ೭
೭)	ಉತ್ಪಾದನೆ ಪ್ರಾರಂಭಿಸಿರುವ ಕೈಗಾರಿಕೆಗಳ ಸಂಖ್ಯೆ	: ೧
		೪೪

೨) ಈ ಮೇಲ್ಕಾಣಿಸಿದ ಕೈಗಾರಿಕೆಗಳಲ್ಲಿ ಎಂಜಿನಿಯರಿಂಗ್ ಸ್ಪೋನ್ ಪಾಲಿಷಿಂಗ್, ಪ್ಲಾಸ್ಟಿಕ್ ಪೈಪ್, ಎಲ್ಲಾ ತರಹದ ಬೇಳೆ, ಎಲ್, ಪಿ, ಜಿ. ಸಿಲಿಂಡರ್, ಮೊಳೆ, ರೋಲಿಂಗ್, ಷಟರ್, ಬಟ್ಟೆಗಳನ್ನು ಪ್ರಿಂಟ್ ಮಾಡುವುದು, ಸಾಫ್ಟ್ ಡ್ರಿಂಕ್ಸ್, ಕಾಪರ್ ಷೀಟ್ಸ್, ಸ್ಪ್ರಿ ಬೋರ್ಡ್, ಔಷಧಿ, ಕಾರುಗೇಟೆಡ್ ಬಾಕ್ಸ್ ಎಣ್ಣೆ ಮತ್ತು ಹಿಪ್ಪೆ, ಈಥರ್ ಸಾಲ್‌ವೆಂಟ್, ಅಕ್ಟಿವೇಟೆಡ್ ಕಾರ್ಬನ್ ಮುಂತಾದವುಗಳು ಒಳಗೊಂಡಿವೆ.

ಈ) ಒಂದು ಲಕ್ಷ ಮತ್ತು ಐವತ್ತು ಸಾವಿರ ಗ್ಯಾಲನ್ ಸಾಮರ್ಥ್ಯವುಳ್ಳ ಎರಡು ಟ್ಯಾಂಕ್ ಗಳನ್ನು ಕಟ್ಟುವುದು, ಭಾವಿ ತೋಡುವ ಮತ್ತು ಅಭಿವೃದ್ಧಿ ಪಡಿಸುವ ಕೆಲಸಗಳು ೫.೭೭ ಲಕ್ಷ ರೂ. ಗಳ ವೆಚ್ಚದಲ್ಲಿ ಪೂರೈಸಲಾಗಿದೆ. ಹೆಚ್ಚುವರಿ ನೀರು ಸರಬರಾಜು ಮಾಡುವ ಸಲುವಾಗಿ ಹಲವಾರು ವ್ಯಾಪಕ ಯೋಜನೆಗಳ ಸಮೀಕ್ಷೆ ಕೈಗೊಂಡಿದೆ.

ಮೀಸಲು ಅರಣ್ಯದಲ್ಲಿರುವ ಉಪದ್ರಕಾರಿ ಆನೆಗಳನ್ನು ಸ್ಥಳಾಂತರಿಸುವ ಬಗ್ಗೆ

೫೯೮ ಶ್ರೀಮತಿ ಸುಮಾವಸಂತ್ (ವಿರಾಜ ಪೇಟೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆ ಮಾಲ್ದಾರೆ ಮೀಸಲು ಕಾಡಿನಲ್ಲಿ ಇತ್ತೀಚೆಗೆ ರೈತರ ಆಸ್ತಿ ಮತ್ತು ಬೆಳೆಗಳನ್ನು ನಾಶ ಪಡಿಸುತ್ತಿದ್ದ ಎರಡು ಆನೆಗಳನ್ನು ಕೊಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ನಷ್ಟ ಹೊಂದಿದ ರೈತರಿಗೆ ಪರಿಹಾರವನ್ನು ಒದಗಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಇ) ಕಟ್ಟೆಪುರದಲ್ಲಿ ಕಾಡಿನ ಆನೆಗಳನ್ನು ಸ್ಥಳಾಂತರಿಸಿದಂತೆ ಈ ವಲಯದಲ್ಲಿ ಆನೆಗಳನ್ನು ಸ್ಥಳಾಂತರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).

ಅ) ಮಡಿಕೇರಿ ವಿಭಾಗದ ಮಾಲ್ದಾರೆ ಮೀಸಲು ಅರಣ್ಯದಲ್ಲಿ ಒಂದು ಗಂಡು ಆನೆಯನ್ನು ಮಾತ್ರ ೩೦-೭-೮೭ ರಂದು ಗುಂಡು ಹಾಕಿ ಕೊಂದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಅಂತಹ ಎಲ್ಲಾ ಪ್ರಕರಣಗಳಲ್ಲಿಯೂ ಇಲಾಖೆಯಿಂದ ಹಾನಿಯನ್ನು ಪರಿಶೀಲಿಸಿ ಪರಿಹಾರವನ್ನು ಕೊಡಲಾಗುತ್ತಿದೆ.

ಇ) ಕಟ್ಟೆಪುರದಲ್ಲಿ ಕೈಗೊಂಡಂತೆ ಆನೆಗಳನ್ನು ಮಾಲ್ದಾರೆಯಿಂದ ನಾಗರಹೊಳೆಗೆ ಸ್ಥಳಾಂತರಿಸಲು ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಅರಣ್ಯ ಪ್ರದೇಶದಲ್ಲಿ ಮರ ಕಡಿಯಲು ಕೂಪುಗಳನ್ನು ಕೊಟ್ಟಿರುವುದರ ಬಗ್ಗೆ

೫೯೦ ಶ್ರೀಮತಿ ಸುಮಾವಸಂತ (ವಿರಾಜಪೇಟೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯಲ್ಲಿ ಮರ ಕಡಿಯುವುದನ್ನು ನಿಲ್ಲಿಸಿದ್ದರೂ ಪುನಃ ಹನ್ನೊಂದು ಕೂಪುಗಳಲ್ಲಿ ಮರ ಕಡಿಯುವ ಬಗ್ಗೆ ಸಮೀಕ್ಷೆ ನಡೆಸಲು ಸರ್ಕಾರದವರು ಆದೇಶ ನೀಡಿರುವುದು ನಿಜವೇ, ಸವಿವರ ವಿವರಣೆ ನೀಡುವುದು.

ಆ) ಹಾಗಿದ್ದಲ್ಲಿ ಇದು ಅರಣ್ಯ ರಕ್ಷಣೆ ಮಾಡುವ ಸರ್ಕಾರದವರ ನೀತಿಗೆ ವ್ಯತಿರಿಕ್ತವಾಗುವುದಿಲ್ಲವೇ ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಕೊಡಗಿನ ಅರಣ್ಯಗಳಲ್ಲಿ ಕಾಮಗಾರಿ ನಡೆಸಲು ಹೊಸದಾಗಿ ರಚಿಸಲಾದ ಕಾರ್ಯ ಯೋಜನೆಯಂತೆ ೧೫ ಕೂಪುಗಳಲ್ಲಿ ಬಲಿತ ಮತ್ತು ಅತಿಯಾಗಿ ಬಲಿತಿರುವ ಮರಗಳನ್ನು ತೆಗೆಯಬೇಕಾಗಿದೆ. ಇದರ ಪೈಕಿ ಎರಡು ಕೂಪುಗಳು ವೈಲ್ಡ್ ಲೈಫ್ ಕೋರ್ ಪ್ರದೇಶದಲ್ಲಿ ಬರುವುದರಿಂದ, ಈ ಎರಡು ಕೂಪುಗಳಲ್ಲಿ ಯಾವುದೇ ಕಾಮಗಾರಿ ನಡೆಸುವುದಿಲ್ಲ. ಉಳಿದ ೧೩ ಕೂಪುಗಳಲ್ಲಿ ಇಲಾಖಾ ಪತಿಯಿಂದ ಅಥವಾ ಕರ್ನಾಟಕ ರಾಜ್ಯ ಅರಣ್ಯ ಉದ್ದಿಮೆ ನಿಗಮದ ಮೂಲಕ ಕಾಮಗಾರಿ ನಡೆಸಲು ಯೋಜಿಸಲಾಗಿದೆ,

ಆ) ಇಲ್ಲ.